ಕರ್ನಾಟಕ ವಿಧಾನ ಪರಿಷತ್ತು

1) ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 396

2) ಸದಸ್ಯರ ಹೆಸರು : ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ)

3) ಉತ್ತರಿಸುವ ದಿನಾಂಕ : 04-03-2020

4) ಉತ್ತರಿಸಬೇಕಾದ ಸಚಿವರು : ಮುಜರಾಯಿ, ಮೀನುಗಾರಿಕೆ ಹಾಗೂ ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

	ಪ್ರಶ್ನೆ	ಉತ್ತರ
ಅ)	ಉತ್ತರ ಕರ್ನಾಟಕ ಭಾಗದಲ್ಲಿ ಮೀನುಗಾರಿಕೆ ಅಭಿವೃದ್ಧಿಗೆ ಸಾಕಷ್ಟು ಅನುಕೂಲತೆಗಳಿದ್ದರೂ ನಿರೀಕ್ಷಿತ ಬದಲಾವಣೆ ಆಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ;	ಸರ್ಕಾರದ ಗಮನಕ್ಕೆ ಬಂದಿದೆ. ಈ ಭಾಗದ ಮೀನುಗಾರಿಕೆ ಅಭಿವೃದ್ಧಿಗಾಗಿ ಮೀನುಗಾರಿಕೆ ಇಲಾಖೆಯಿಂದ ಹಲವಾರು ಕಾರ್ಯಕ್ರಮಗಳನ್ನು ಅನುಷ್ಠಾನಗೊಳಿಸಲಾಗುತ್ತಿದೆ. ಈ ನಿಟ್ಟಿನಲ್ಲಿ ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಉತ್ತರ ಕರ್ನಾಟಕ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಕೇಂದ್ರವನ್ನು ಬಾಗಲಕೋಟೆಯಲ್ಲಿ ಸ್ಥಾಪಿಸಲಾಗಿದ್ದು, ಜಂಟಿ ನಿರ್ದೇಶಕರ ಹುದ್ದೆಯನ್ನು ಸೃಜಿಸಲಾಗಿದ್ದು, ಈ ಹುದ್ದೆಗೆ ಜಂಟಿ ನಿರ್ದೇಶಕರನ್ನು ನೇಮಕ ಮಾಡಿದೆ.
ಆ)	ಉತ್ತರ ಕರ್ನಾಟಕದಲ್ಲಿ ಹಲವಾರು ಕೆರೆ-ಕಟ್ಟೆಗಳು ಹಾಗೂ ಸಾಕಷ್ಟು ಜಲಾಶಯಗಳಿದ್ದರೂ ಮೀನುಗಾರಿಕೆ ಅಭಿವೃದ್ಧಿಗೆ ಕ್ರಮಕೈಗೊಳ್ಳದಿರಲು ಕಾರಣವೇನು ;	ಉತ್ತರ ಕರ್ನಾಟಕ ಭಾಗದಲ್ಲಿ ಸಾಕಷ್ಟು ಒಳನಾಡು ಜಲಸಂಪನ್ಮೂಲಗಳಿದ್ದು, ಈ ಭಾಗದ ಮೀನುಗಾರಿಕೆ ಅಭಿವೃದ್ಧಿಗೆ ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗಿದೆ. ವಿವರಗಳನ್ನು **ಅನುಬಂಧ-1** ರಲ್ಲಿ ಒದಗಿಸಲಾಗಿದೆ.
ಇ)	ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದಡಿಯಲ್ಲಿ ನಡೆಸಲಾಗುವ ಶಾಖೆಗಳ ಸಂಖ್ಯೆ ಎಷ್ಟು ; (ಜಿಲ್ಲಾವಾರು ಮಾಹಿತಿ ನೀಡುವುದು)	ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದಡಿಯಲ್ಲಿ 7 ಶಾಖೆಗಳನ್ನು ನಡೆಸಲಾಗುತ್ತಿದೆ. ಜಿಲ್ಲಾವಾರು ವಾಹಿತಿ ಈ ಕೆಳಗಿನಂತಿದೆ. ದಕ್ಷಿಣ ಕನ್ನಡ ಜಿಲ್ಲೆ : 1 ಉಡುಪಿ ಜಿಲ್ಲೆ : 2 ಉತ್ತರಕನ್ನಡ ಜಿಲ್ಲೆ : 4 ಒಟ್ಟು : 7

ಈ)	ಕೆ.ಎಫ್.ಡಿ.ಸಿ. ಯಿಂದ ನಡೆಸುವ ಕ್ಯಾಂಟೀನುಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು)	ಕೆ.ಎಫ್.ಡಿ.ಸಿ. ಯಿಂದ 14 ಕ್ಯಾಂಟೀನುಗಳ ನಡೆಸಲಾಗುತ್ತಿದೆ. ಜಿಲ್ಲಾವಾರು ಮಾಹಿತಿ ಈ ಕೆಳಗಿನಂತಿದೆ. 1. ಬೆಂಗಳೂರು ಜಿಲ್ಲೆ : 3 (ಕಬ್ಬನ್‌ಪಾರ್ಕ್, ಇಂದಿರಾನಗರ, ಯಲಹಂಕ) 2. ಕೋಲಾರ ಜಿಲ್ಲೆ : 2 (ಕೋಲಾರ, ಮುಳಬಾಗಿಲು) 3. ತುಮಕೂರು ಜಿಲ್ಲೆ : 1 4. ಮೈಸೂರು ಜಿಲ್ಲೆ : 2 (ಗೋಕುಲಂ, ಸಿದ್ಧಲಿಂಗಾಪುರ) 5. ದಾವಣಗೆರೆ ಜಿಲ್ಲೆ : 1 6. ಶಿವಮೊಗ್ಗ ಜಿಲ್ಲೆ : 1 7. ದಕ್ಷಿಣ ಕನ್ನಡ ಜಿಲ್ಲೆ : 2 (ಚಿಲಿಂಬಿ - ಮಂಗಳೂರು ಮೊಬೈಲ್‌ಕ್ಯಾಂಟೀನ್ - ಮಂಗಳೂರು) 8. ಬಳ್ಳಾರಿ ಜಿಲ್ಲೆ : 1
ಉ	ಉತ್ತರ ಕರ್ನಾಟಕದ ಯಾವ ಯಾವ ಜಿಲ್ಲೆಗಳಲ್ಲಿ ಇದರ ಶಾಖೆಗಳಿವೆ; ಇಲ್ಲದಿದ್ದಲ್ಲಿ, ಇದರ ಶಾಖೆಗಳನ್ನು ಪ್ರಾರಂಭಿಸಲು ಇರುವ ಅಡಚಣೆಗಳೇನು?	ಉತ್ತರ ಕರ್ನಾಟಕದಲ್ಲಿ ನಿಗಮದ ಯಾವುದೇ ಶಾಖೆಗಳು ಇರುವುದಿಲ್ಲ. ಸದ್ಯ ಬಳ್ಳಾರಿ ಜಿಲ್ಲೆಯಲ್ಲಿ ಕರ್ನಾಟಕ ಮೀನುಗಾರಿಕಾ ಅಭಿವೃದ್ಧಿ ನಿಗಮದ ಮತ್ಸ್ಯದರ್ಶಿನಿಯು ಕಾರ್ಯನಿರ್ವಹಿಸುತ್ತಿದೆ. ಉತ್ತರ ಕರ್ನಾಟಕದ ಇನ್ನುಳಿದ ಜಿಲ್ಲೆಗಳಲ್ಲಿ ನಿಗಮದ ಸ್ವಂತ ನಿವೇಶನ ಇಲ್ಲದೇ ಇರುವುದರಿಂದ ಮತ್ಸ್ಯದರ್ಶಿನಿಗಳನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ.

ಸಂಖ್ಯೆ: ಪಸಂಮೀ ಇ-33 ಮೀಇಯೋ 2020

(ಕೋಟಾ ಶ್ರೀನಿವಾಸ ಪೂಜಾರಿ)
ಮುಜರಾಯಿ, ಮೀನುಗಾರಿಕೆ ಹಾಗೂ
ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಮಾನ್ಯ ವಿಧಾನ ಪರಿಷತ್ ಸದಸ್ಯರಾದ ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಗಳ ಕ್ಷೇತ್ರ) ಇವರ ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ: 396 ರ

ಅನುಬಂಧ-1

ಉತ್ತರ ಕರ್ನಾಟಕ ಭಾಗದಲ್ಲಿ ಮೀನುಗಾರಿಕೆ ಅಭಿವೃದ್ಧಿಗಾಗಿ ಕೈಗೊಳ್ಳಲಾಗುವ ಕಾರ್ಯಕ್ರಮ ಹಾಗೂ ಯೋಜನೆಗಳು

1) ಉತ್ತರ ಕರ್ನಾಟಕ ಪ್ರದೇಶದ ಜಲಸಂಪನ್ಮೂಲಗಳನ್ನು (ಒಳನಾಡು ಜಲಸಂಪನ್ಮೂಲಗಳ ವಿಲೇವಾರಿ ಕಾರ್ಯನೀತಿ 2014 ರಂತೆ) ಆ ಭಾಗದ ಅರ್ಹ ಮೀನುಗಾರರ ಸಹಕಾರ ಸಂಘಗಳಿಗೆ ಗುತ್ತಿಗೆ ನೀಡುವುದಲ್ಲದೆ ಉಳಿದ ಕೆರೆಗಳನ್ನು ಟೆಂಡರ್ ಕಂ ಹರಾಜು ಮೂಲಕ ವಿಲೇವಾರಿ ಮಾಡುವುದು ಹಾಗೂ ಆಯ್ದ ಜಲಾಶಯಗಳಲ್ಲಿ ಮೀನು ಹಿಡಿಯಲು ಪರವಾನಗಿ ನೀಡುವ ಮೂಲಕ ಅಭಿವೃದ್ಧಿ ಪಡಿಸಲಾಗುತ್ತಿದೆ. ಪ್ರಸಕ್ತ ಸಾಲಿನಲ್ಲಿ ಜನವರಿ 2020ವರೆಗೆ ವಿಲೇವಾರಿ ಮಾಡಿ ಅಭಿವೃದ್ಧಿ ಪಡಿಸಿದ ಕೆರೆಗಳ ವಿವರಗಳು ಈ ಕೆಳಗಿನಂತಿವೆ:

ಕ್ರ ಸಂ	ಜಿಲ್ಲೆ	ಇಲಾಖಾ ಕೆರೆಗಳು		ಗ್ರಾಮ ಪಂಚಾಯ್ತಿ ಕೆರೆಗಳು		ಖಾಸಗಿ ಕೆರೆಗಳು	
		ಕೆರೆಗಳ ಸಂಖ್ಯೆ	ಬಿತ್ತನೆ ಮೀನುಮರಿಗಳು	ಕೆರೆಗಳ ಸಂಖ್ಯೆ	ಬಿತ್ತನೆ ಮೀನುಮರಿಗಳು	ಕೆರೆಗಳ ಸಂಖ್ಯೆ	ಬಿತ್ತನೆ ಮೀನುಮರಿಗಳು
1	ಧಾರವಾಡ	126	50.04	73	9.70	11.50	2.75
2	ಹಾವೇರಿ	179	51.55	227	32.54	9.40	0.86
3	ಬೆಳಗಾಂ	133	48.00	36	6.58	78.50	10.05
4	ಬಿಜಾಪುರ	136	60.02	14	3.50	0.00	0.00
5	ಬಾಗಲಕೋಟೆ	33	12.21	25	5.23	6.00	1.17
6	ಗದಗ್	23	4.09	2	0.30	2.50	0.16
7	ಕೊಪ್ಪಳ	50	44.10	25	12.22	95.00	0.00
8	ಬಳ್ಳಾರಿ	81	98.46	41	26.70	785.00	62.00
9	ರಾಯಚೂರು	63	66.06	4	5.00	918.00	92.30
10	ಕಲಬುರ್ಗಿ	75	52.00	70	25.00	17.00	8.00
11	ಯಾದಗಿರಿ	66	49.00	41	9.00	15.00	1.60
12	ಬೀದರ್	64	30.00	10	0.60	0.00	10.00
ಒಟ್ಟು		**1029**	**565.53**	**568**	**136.37**	**1938**	**188.89**

2) ಉತ್ತರ ಕರ್ನಾಟಕ ಭಾಗದ ಮೀನುಗಾರಿಕೆ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಲು ಬಾಗಲಕೋಟೆ ಜಿಲ್ಲೆಯಲ್ಲಿ "ನಿಜಶರಣ ಶ್ರೀ ಅಂಬಿಗರ ಚೌಡಯ್ಯ ಒಳನಾಡು ಮೀನುಗಾರಿಕೆ ಅಭಿವೃದ್ಧಿ ಕೇಂದ್ರ" ವನ್ನು ಸ್ಥಾಪಿಸಲಾಗಿದ್ದು ಈ ಸ್ವಾಯತ್ತ ಕೇಂದ್ರವು ಈ ಭಾಗದ ಮೀನುಗಾರಿಕೆ ಶಿಕ್ಷಣ, ಸಂಶೋಧನೆ ಮತ್ತು

ಅಭಿವೃದ್ಧಿಗಾಗಿ ಅವಶ್ಯವಿರುವ ಮೀನುಗಾರಿಕೆ ಸಂಸ್ಥೆಗಳು ಹಾಗೂ ಮೀನುಗಾರರ ಸಂಘಟನೆಗಳ ಸಹಯೋಗದೊಂದಿಗೆ ಉತ್ತರ ಕರ್ನಾಟಕ ಮೀನುಗಾರಿಕೆ ಮತ್ತು ಮೀನು ಕೃಷಿ ಅಭಿವೃದ್ಧಿಗೆ ಅವಶ್ಯವಿರುವ ಎಲ್ಲಾ ಕಾರ್ಯ ಚಟುವಟಿಕೆಗಳನ್ನು ಜಾರಿಗೆ ತರುವ ಉದ್ದೇಶ ಹೊಂದಿದೆ.

3) ಉತ್ತರ ಕರ್ನಾಟಕದ ಜಲಾಶಯಗಳಲ್ಲಿ ಮತ್ಸ್ಯ ಸಂಪತ್ತನ್ನು ಅಭಿವೃದ್ಧಿಪಡಿಸಲು ಜಲಾಶಯ ಮೀನುಗಾರಿಕೆ ಅಭಿವೃದ್ಧಿ ಯೋಜನೆ ಅಡಿ ಬಲಿತ ಬಿತ್ತನೆ ಮೀನುಮರಿಗಳನ್ನು ದಾಸ್ತಾನು ಮಾಡಲಾಗುತ್ತಿದೆ. 2019–20 ನೇ ಸಾಲಿನಲ್ಲಿ ರೂ. 54.03 ಲಕ್ಷ ಅನುದಾನ ಒದಗಿಸಲಾಗಿದೆ.

4) ಉತ್ತರ ಕರ್ನಾಟಕದ ಒಳನಾಡು ಮೀನುಗಾರರಿಗೆ ಫೈಬರ್ ಗ್ಲಾಸ್, ಬಲೆ ಕಿಟ್‌ಗಳನ್ನು ಉಚಿತವಾಗಿ ರೂ 72.00 ಲಕ್ಷ ಅನುದಾನದಲ್ಲಿ ವಿತರಿಸಲಾಗುತ್ತಿದೆ

5) ಮತ್ಸ್ಯ ಕೃಷಿ ಆಶಾ ಕಿರಣ ಯೋಜನೆಯಡಿ ಕೆರೆಗಳನ್ನು ಮೀನು ಕೃಷಿ ಪ್ರೋತ್ಸಾಹಿಸಲು ಉತ್ತರ ಕರ್ನಾಟಕದ ಭಾಗದ ಜಿಲ್ಲೆಗಳಿಗೆ 2019–20 ನೇ ಸಾಲಿನಲ್ಲಿ ರೂ 53.00 ಲಕ್ಷ ಅನುದಾನ ಒದಗಿಸಲಾಗಿದೆ.

6) ಭಾರತ ಸರ್ಕಾರದ ನೀಲಿ ಕ್ರಾಂತಿ ಯೋಜನೆಯಡಿ ಮೀನು ಕೃಷಿ ಕೊಳ ನಿರ್ಮಾಣ ಮತ್ತು ಮೀನು ಮಾರಾಟಕ್ಕಾಗಿ ವಾಹನ ಖರೀದಿಗೆ ಸಹಾಯ ಯೋಜನೆಗಳಡಿ 2019–20 ನೇ ಸಾಲಿನಲ್ಲಿ ಉತ್ತರ ಕರ್ನಾಟಕದ ಭಾಗದ ಜಿಲ್ಲೆಗಳಿಗೆ ರೂ 452.67 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.

7) ಉತ್ತರ ಕರ್ನಾಟಕ ಭಾಗದ ಜಿಲ್ಲೆಗಳಲ್ಲಿ ವಿಶೇಷ ಘಟಕ ಯೋಜನೆಗೆ ರೂ 21.6 ಲಕ್ಷ ಮತ್ತು ಗಿರಿಜನ ಉಪಯೋಜನೆಯಡಿ ರೂ 29.85 ಲಕ್ಷ ರಲ್ಲಿ ಅನುದಾನ ಒದಗಿಸಲಾಗಿದೆ.

8) ಉತ್ತರ ಕರ್ನಾಟಕ ಭಾಗಕ್ಕೆ ಒಳನಾಡು ಮೀನು ಕೃಷಿಗೆ ಪ್ರೋತ್ಸಾಹ ಯೋಜನೆಯಡಿ ಮೀನುಗಾರರ ಸಹಕಾರ ಸಂಘಗಳು ಗುತ್ತಿಗೆ ಪಡೆದಿರುವ ಕೆರೆಗಳಿಗೆ 69.50 ಲಕ್ಷ ಮೀನುಮರಿಗಳನ್ನು ಬಿತ್ತನೆ ಮಾಡಲು ರೂ 90.28 ಲಕ್ಷ ಅನುದಾನ ಬಿಡುಗಡೆ ಮಾಡಲಾಗಿದೆ.

ಮೀನುಗಾರಿಕೆ ನಿರ್ದೇಶಕರು